ಹೊರಡಿಸಲಾಗಿದೆ ಶೇ 89 92ರಷ್ಟಿರುವ ಗ್ರಾಮೀಣ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ ಆಯ್ಕೆಯಾದ ಅಂಗನವಾಡಿ ಕಾರ್ಯಕರ್ತೆಯರು ಜುಲೈ 2006ರ ಅಂತ್ಯದಲ್ಲಿ ತಮ್ಮ ಕರ್ತವ್ಯಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಶೇ 3 5ರಷ್ಟಿರುವ ನಗರ ಪ್ರದೇಶಗಳ ಅಂಗನವಾಡಿ ಕೇಂದ್ರಗಳ ನೇಮಕಾತಿ ಸಮಿತಿ ಮನರ್ ರಚನೆ ಕಾರ್ಯ ಪರಿಶೀಲಿಸುತ್ತಿರುವಾಗ ಮಾನ್ಯ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂ 11276/06, 13908/06 ಮತ್ತು 14244/06 ಗಳಲ್ಲಿ ಅನುಕ್ರಮವಾಗಿ ದಿ 21 8 2006, 29 9 2006 ಮತ್ತು 11 10 2006ರಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಗೆ ತಡೆಯಾಜ್ಞೆ ನೀಡಿರುವುದರಿಂದ ನಗರ ಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಯ ಪುನರ್ ರಚನೆ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ ಆದ್ದರಿಂದ ನಗರ ಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಯ ಮನರ್ ರಚನೆಯಲ್ಲಿ ವಿಳಂಬವಾಗಿರುತ್ತದೆ

ಇ) ಅನ್ವಯಿಸುವುದಿಲ್ಲ

ಈ) ತಡೆಯಾಜ್ಞೆ ತೆರವಾದ ಕೂಡಲೇ ನಗರ ಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿ ಮನರ್ ರಚನೆ ಕಾರ್ಯ ಕೈಗೆತ್ತಿಕೊಳ್ಳಲಾಗುವುದು

363 (335) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ ತೆರಿಗೆಯಿಂದ, ಕಟ್ಟಡ ಅನುಮತಿಯಿಂದ ಸಿ ಸಿ ಯಿಂದ ಹಾಗೂ ಇನ್ನಿತರೆ ಮೂಲಗಳಿಂದ ಕಳೆದ ಮೂರು ವರ್ಷ ಗಳಿಂದ ಬಂದ ಆದಾಯವೆಷ್ಟು (2004–05, 2005–07 ಮತ್ತು 2006–07ನೇ ಸಾಲುಗಳ ವಿವರ ನೀಡುವುದು),

ಆ) ಒಟ್ಟು ಬಂದ ಆದಾಯದಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸ ಕೈಗೆತ್ತಿಕೊಳ್ಳಲಾಗಿದೆ (ಪೂರ್ಣ ವಿವರ ನೀಡುವುದು)?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಕಳೆದ ಮೂರು ವರ್ಷಗಳ ಪಾಲಿಕೆ ಆದಾಯದ ವಿವರ

(ರೂ ಲಕ್ಷಗಳಲ್ಲಿ)

ಕ್ರ ಸಂ	ವಿವರ	2004–05	2005–06	2006–07
1	ಆಸ್ತಿ ತೆರಿಗೆ	1548 14	1635 49	996 11

2	ಕಟ್ಟಡ ಪರವಾನಿಗೆ ಹಾಗೂ ಮುಕ್ತಾಯ ಪ್ರಮಾಣಪತ್ರ (ಸಿ ಸಿ) ದಿಂದ	42 11	110 40	51 05
3	ಇತರೆ ಸ್ವೀಕೃತಿಗಳು	680 88	1799 90	1516 51
4	ಸರ್ಕಾರದಿಂದ ಅನುದಾನಗಳು	2544 41	2917 26	3543 09
	ಒಟ್ಟು	4815 54	6463 05	6106 76

ಆ) ಈ ರೀತಿ ಬಂದ ಆದಾಯದಲ್ಲಿ ರಸ್ತೆ ಡಾಂಬರೀಕರಣ, ಸ್ಮಶಾನ ಸುಧಾರಣೆ, ಸೇತುವೆಗಳ ನಿರ್ಮಾಣ, ಒಳಚರಂಡಿ ಕೊಳವೆ, ತೆರೆದ ಚರಂಡಿ, ಗಾರ್ಡನ್ ಹಾಗೂ ಖುಲ್ಲಾ ಜಾಗೆಗೆ ತಂತಿ ಬೇಲಿ ಹಾಕುವುದು ಮಹಾನಗರ ಪಾಲಿಕೆ ಕಛೇರಿ ಕಟ್ಟಡಗಳ ಸುಸ್ಥಿತಿ ಮಹಾನಗರ ಪಾಲಿಕೆಯ ಅತಿಕ್ರಮಿಸಿದ ಜಾಗೆಯನ್ನು ತೆರವುಗೊಳಿಸಿ ಸಾರ್ವಜನಿಕರ ಅನುಕೂಲಕ್ಕಾಗಿ ಸುಸಜ್ಜಿತ ಕಾಲುದಾರಿಗಳನ್ನು ನಿಮಿಸಲಾಗಿದೆ ಉದ್ಯಾನವನಗಳ ಅಭಿವೃದ್ಧಿ, ಹಲವಾರು ನಗರ ಸೌಂದರ್ಯೀಕರಣ, ಸಕಲ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಹಲವಾರು ವೃತ್ತಗಳಲ್ಲಿ ಹೈಮಾಸ್ಕ್ ವಿದ್ಯುತ್ ದ್ವೀಪ ಅಳವಡಿಸಲಾಗಿದೆ ಹಾಗೂ ಸಾರ್ವಜನಿಕರಿಗೆ ಬೆಳಕಿನ ವ್ಯವಸ್ಥೆ ಮಾಡಲು ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ

ಅನುಬಂಧ

ಕೈಗೊಳ್ಳಾದ ಅಭಿವೃದ್ಧಿ ಕಾಮಗಾರಿ ವಿವರ 1 4 2004 ರಿಂದ 31 12 2006

(ರೂ ಲಕ್ಷಗಳಲ್ಲಿ)

ವಿವರಗಳು	2004–05	2005–06	2006–07
ಲೋಕೋಪಯೋಗಿ	359 83	158 08	199 10
ಚರಂಡಿ, ತೆರೆದ ಕಾಲುವೆ ಹಾಗೂ ಸೇತುವೆಗಳು	214 06	137 35	202 73
ಒಳಚರಂಡಿ	214 06	137 35	202 73
ಪಾದಚಾರಿ ಕಾಲುದಾರಿ	0 00	136 77	225 02
ಕಟ್ಟಡಗಳು	27 49	17 74	32 97

ರಸ್ತೆ ಖಡೀಕರಣ ಹಾಗೂ ಡಾಂಬರೀಕರಣ	441 54	511 91	559 85
ವಿದ್ಯುಚ್ಛಕ್ತೀಕರಣ ಹಾಗೂ ಬೀದಿ ದೀಪಗಳು	151 48	105 26	145 57
ಉದ್ಯಾನವನಗಳು	42 24	76 33	30 02
ನೀರು ಸರಬರಾಜು	178 31	108 60	72 82
ಇತರೆ ಕಾಮಗಾರಿಗಳು	135 45	356 78	275 31
ಘನತ್ಯಾಜ್ಯ ನಿರ್ವಹಣೆ ಹಾಗೂ ವೈದ್ಯಕೀಯ			
ಆರೋಗ್ಯ ಹಾಗೂ ಘನತ್ಯಾಜ್ಯ ನಿರ್ವಹಣೆ	375 27	432 65	315 52
ಆಸ್ಪತ್ರೆಗಳು ಮತ್ತು ಶುಶ್ರೂಶಾಲಯಗಳು	185 80	27 70	17 30
ಪ ಜ /ಪ ಪಂ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳು	218,23	271 76	266 58

365 (671) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) ಹೊನ್ನಾಳಿ ಜಬ್ಬಾರ್. ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) Whether the Government is aware that most of the inspection bungalows and travellers bungalows are not properly maintained,